Govt. of Karnataka [C.R.P. 67

Deposition Sheets (R.P. No. 57)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶಿರಾ**

**ಪ್ರಕರಣ ಸಂಖ್ಯೆಃ 1362/2025**

**ದಿನಾಂಕಃ 25.02.2026** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

| ಸಿಡಬ್ಲ್ಯುಃ | 1 | ಪಿಡಬ್ಲ್ಯು | 1 |
|---|---|---|---|
| ಹೆಸರು | ಹೆಚ್ ಎಂ ಆನಂದಕುಮಾರ್ | | |
| ತಂದೆ / ಗಂಡನ ಹೆಸರು | ಹೆಚ್ ಮುದ್ದಹರಿಯಪ್ಪ | | |
| ವಯಸ್ಸು | 54 | | |
| ಉದ್ಯೋಗ | ಪಿ ಎಸ್ ಐ , ಶಿರಾ ಪೋಲಿಸ್ ಠಾಣೆ | | |
| ವಾಸ | ಶಿರಾ ಟೌನ್ | | |

**ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದಃ**

ನಾನು ಜನವರಿ 2024 ರಿಂದ ಇಲ್ಲಿಯವರೆಗೂ ಶಿರಾ ನಗರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 10-02-2025 ರಂದು ನನ್ನ ಮೇಲಾಧಿಕಾರಿಯವರ ಆದೇಶದಂತೆ ಡಿಡಿ ಪ್ರಕರಣದಲ್ಲಿ ಜಿಯೋ ಪೆಟ್ರೋಲ್ ಬಂಕ್ ಮುಂಭಾಗ , ಸಪ್ತಗಿರಿ ಬಡಾವಣೆಯಲ್ಲಿ ಬ್ಯಾರಿಕೆಟ್ ಹಾಕಿ ವಾಹನಗಳನ್ನು ತಡೆದು ತಪಾಸಣೆ ಮಾಡುತ್ತಿದ್ದಾಗ , ಸುಮಾರು 10.15 ಗಂಟೆ ಸಮಯದಲ್ಲಿ ನಮ್ಮನ್ನು ನೋಡಿ ದ್ವಿಚಕ್ರ ವಾಹನದಲ್ಲಿ ಬಂದ ಒಬ್ಬ ವ್ಯಕ್ತಿ ಮೋಟಾರ್ ಸೈಕಲ್ ನ್ನು ಹಿಂದಕ್ಕೆ ತಿರುಗಿಸಿಕೊಂಡು ಓಡಿ ಹೋಗಲು ಪ್ರಯತ್ನಿಸಿದಾಗ , ಆಗ ಹೆಚ್ ಸಿ-184 , ಪಿಸಿ-984 ರವರು ಚೆಕ್ ಪೋಸ್ಟ್ ನಲ್ಲಿ ಕರ್ತವ್ಯ

ನಿರ್ವಹಿಸುತ್ತಿದ್ದ ಅವರು ಆತನನ್ನು ಹಿಡಿದು ಹೆಸರು ವಿಳಾಸ ಕೇಳಿದಾಗ , ಅನುಮಾನಾಸ್ಪದವಾಗಿ ಮಾತನಾಡಿದ ಕಾರಣ , ಆತನ ವಾಹನದ ದಾಖಲೆಗಳನ್ನು ಕೇಳಲಾಗಿ ಆತ ದಾಖಲೆ ಇಲ್ಲ ಎಂದು ಹೇಳಿರುತ್ತಾನೆ. ಆತನು ತಾನು ಶಿರಾದ ಸರ್ಕಾರಿ ಆಸ್ಪತ್ರೆಯ ಬಳಿ ಇಂದ ದ್ವಿಚಕ್ರ ವಾಹನವನ್ನು ಕಳ್ಳತನ ಮಾಡಿಕೊಂಡು ಊರಿಗೆ ಹೋಗುತ್ತಿದ್ದೇನೆ ಎಂದು ತಿಳಿಸಿದ ಮೇರೆಗೆ , ಆತನ ಹೆಸರು ಕೇಳಲಾಗಿ ಆತ ಶಶಿಕುಮಾರ್ ಬಿನ್ ಲೇ. ನರಸಿಂಹಯ್ಯ , 27 ವರ್ಷ , ಕಲ್ಲುಗುಡಿ ಗ್ರಾಮ , ಚೇಳೂರು ಹೋಬಳಿ , ಗುಬ್ಬಿ ತಾಲ್ಲೂಕು ಎಂದು ತಡವರಿಸಿಕೊಂಡು ಉತ್ತರಿಸಿರುತ್ತಾನೆ. ವಾಹನದ ನಂ. ನೋಡಲಾಗಿ ಕೆಎ-06-ಇಬಿ-4556 ಹಿರೋ ಹೋಂಡಾ ಸ್ಪೆಂಡರ್ ಪ್ಲಸ್ ಆಗಿತ್ತು, ನಂತರ ಅಲ್ಲೇ ಇದ್ದ ಇಬ್ಬರು ಆಸಾಮಿಗಳನ್ನು ಪಂಚರನ್ನಾಗಿ ಸಹಕರಿಸಲು ಕೇಳಿಕೊಂಡಾಗ ಅವರು ಒಪ್ಪಿದ ಮೇರೆಗೆ , ಸದರಿ ವಿಚಾರವನ್ನು ಅದೇ ದಿನ ರಾತ್ರಿ ಪಂಚರಿಗೆ ತಿಳಿಸಿ , ಕರೆದುಕೊಂಡು ಹೋಗಿ ರಾತ್ರಿ 10.20 ರಿಂದ 11.00 ಗಂಟೆವರೆಗೆ ಅಮಾನತ್ತು ಕ್ರಮ ಜರುಗಿಸಿರುತ್ತೇನೆ. ನಂತರ 11.30 ಕ್ಕೆ ಠಾಣೆಗೆ ಆಸಾಮಿ , ಪಂಚನಾಮೆ ಮತ್ತು ಮು.ಮಾಲಿನೊಂದಿಗೆ ಹಾಜರಾಗಿ ಠಾಣಾಧಿಕಾರಿಗೆ ದೂರು ದಾಖಲಿಸಿರುತ್ತೇನೆ. ದೂರನ್ನು ನೋಡುತ್ತಿದ್ದು , ಅದನ್ನು **ನಿಪಿ-1** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು **ನಿಪಿ-1(ಎ)** ಎಂದು ಗುರುತಿಸಲಾಯಿತು. ಅಮಾನತ್ತು ಮಹಜರ್ ನ್ನು **ನಿಪಿ-2** ಎಂದು , ಸಾಕ್ಷಿಯ ಸಹಿಯನ್ನು **ನಿಪಿ-2(ಎ)** ಎಂದು ಗುರುತಿಸಲಾಯಿತು. ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯನ್ನು ವಿಡಿಯೋ ಕಾನ್ಪರೆನ್ಸ್ ಮೂಲಕ ಹಾಜರುಪಡಿಸಿದ್ದು , ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಆ ದಿನ ನನ್ನ ಮೇಲಾಧಿಕಾರಿಗಳು ನನ್ನನ್ನು ಡಿಡಿ ಪ್ರಕರಣದಲ್ಲಿ ತನಿಖೆ ಮಾಡಲು ಲಿಖಿತವಾಗಿ ಆದೇಶ ನೀಡಿರಲಿಲ್ಲ , ಮುಂದುವರೆದು ಮೌಖಿಕವಾಗಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಾವು ಆ ದಿನ ಜಿಯೋ ಪೆಟ್ರೋಲ್ ಬಂಕ್ ಬಳಿ ತಪಾಸಣೆ ಮಾಡುತ್ತಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅ ದಿನ ಆರೋಪಿಯು ಮೊಟಾರ್ ಬೈಕ್ ಕಳ್ಳತನ ಮಾಡಿಕೊಂಡು ಬಂದಿದ್ದನು ಎಂದು ಸುಳ್ಳು ಹೇಳುತಿತದ್ದೇನೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಯವರ ಮಾತು ಕೇಳಿ ಆರೋಪಿಯ ವಿರುದ್ದ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪಂಚರಿಗೆ ಲಿಖಿತ ನೋಟಿಸ್ ನೀಡಿರುವುದಿಲ್ಲ. ಪಂಚನಾಮೆ ಕಾಲದಲ್ಲಿ ಒಟ್ಟು 7 ಜನ ಇದ್ದೆವು. 4 ಜನ ಪೋಲಿಸರು , ಆರೋಪಿ ಮತ್ತು ಇಬ್ಬರು ಪಂಚರು ಇದ್ದೆವು. ಸಾರ್ವಜನಿಕರು ದೂರದಲ್ಲಿ ನಿಂತಿದ್ದರು. ಸಾರ್ವಜನಿಕರನ್ನು ಪಂಚರಾಗಿ ಕರೆಯಲು ತೊಂದರೆ ಇರಲಿಲ್ಲ ಎಂದರೆ ಸರಿ. ಮೊದಲು ವಾಹನ ವಶಪಡಿಸಿಕೂಂಡು ಪಂಚನಾಮೆ ಜರುಗಿಸಿ , ಆ ನಂತರ ದೂರು ದಾಖಲಿಸಿರುತ್ತೇನೆ. ಮೊದಲು ದೂರು ದಾಖಲಿಸಿ , ನಂತರ ಪಂಚನಾಮೆ ಮಾಡಬೇಕು ಎಂದರೆ ಸರಿಯಲ್ಲ. ನಾನು ಆ ದಿನ ರಾತ್ರಿ ಗಸ್ತಿನಲ್ಲಿದ್ದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ. ನಾನು ಆ ದಿನ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ನ್ನುಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನ ವಿರುದ್ದ ಸುಳ್ಳು ದೂರು ದಾಖಲಿಸಿ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.